## .ಸಾಮಾನ್ಯ ಪ್ರವೇಶ ಪರೀಕ್ಷೆಯ ಬಗ್ಗೆ ಅಭ್ಯರ್ಥಿಗಳಿಗೆ ಸೂಚನೆಗಳು

★ ಈ ಪರೀಕ್ಷೆಯಲ್ಲಿ ವಿತರಿಸುವ ಪ್ರಶ್ನೆ ಪತ್ರಿಕೆ ಪುಸ್ತಿಕೆ ಒಳಭಾಗದಲ್ಲಿ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಅಳವಡಿಸಲಾಗಿದ್ದು, ಪ್ರಶ್ನೆ ಪತ್ರಿಕೆ ಪುಸ್ತಿಕೆ ಸೀಲ್ ತೆಗೆಯುವಾಗ ಅಭ್ಯರ್ಥಿಗಳು ಜೋಪಾನವಾಗಿ ತೆರೆಯ ಬೇಕಾಗಿರುತ್ತದೆ. ಪ್ರಶ್ನೆ ಪತ್ರಿಕೆ ಪುಸ್ತಿಕೆ ಮೇಲೆ ಕ್ರಮಸಂಖ್ಯೆಯನ್ನು ನೀಡಲಾಗಿದೆ.

★ ಒಂದಕ್ಕಿಂತ ಹೆಚ್ಚು ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ತಾವು ಪಡೆದ ಎಲ್ಲಾ ಪ್ರವೇಶ ಪತ್ರಗಳನ್ನು (ಪರೀಕ್ಷೆಗೆ ಹಾಜರಾಗುವ ಕೇಂದ್ರದ ಪ್ರವೇಶ ಪತ್ರವನ್ನು ಹೊರತುಪಡಿಸಿ ಉಳಿದವುಗಳು) ಪರೀಕ್ಷಾ ದಿನದಂದು ಪರೀಕ್ಷೆಗೆ ಹಾಜರಾಗುವ ಕೇಂದ್ರದಲ್ಲಿ ಕೊಠಡಿ ಮೇಲ್ವಿಚಾರಕರಿಗೆ ಒಪ್ಪಿಸುವುದು. ಇದರಿಂದಾಗಿ ತಮ್ಮ ಬಳಿ ಇರುವ ಎಲ್ಲಾ ಪ್ರವೇಶ ಪತ್ರಗಳನ್ನು ಪರೀಕ್ಷೆಯ ದಿನ ಕಡ್ಡಾಯವಾಗಿ ತರುವುದು.

★ ಅಭ್ಯರ್ಥಿಗಳು ತಮ್ಮ ಬಗೆಗಿನ ಮಾಹಿತಿಯನ್ನು ಅರ್ಜಿ ನಮೂನೆಯಲ್ಲಿ ಭರ್ತಿಮಾಡಿರುವಂತೆ ತಮ್ಮ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿಯೂ ಮಾಹಿತಿಯನ್ನು ಭರ್ತಿಮಾಡುವುದು.

★ ಪರೀಕ್ಷಾ ಕೊಠಡಿಯಲ್ಲಿ ನಿಶ್ಯಬ್ದತೆ ಮತ್ತು ಪರೀಕ್ಷಾ ಶಿಸ್ತನ್ನು ಕಾಪಾಡಿಕೊಳ್ಳುವುದು.

★ ಅಭ್ಯರ್ಥಿಗಳು ತಮ್ಮ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಪ್ರಶ್ನೆಪತ್ರಿಕೆ ಪುಸ್ತಿಕೆಯ ಕ್ರಮಸಂಖ್ಯೆಯನ್ನು, ನೋಂದಣಿ ಸಂಖ್ಯೆಯನ್ನು ನಿಗದಿ ಪಡಿಸಿರುವ ಸ್ಥಳದಲ್ಲಿ ಮಾತ್ರ ನೀಲಿ / ಕಪ್ಪು ಬಾಲ್ ಪಾಯಿಂಟ್ ಪೆನ್ನಿನಿಂದ ಬರೆದು ತುಂಬಬೇಕು.

★ ಅಭ್ಯರ್ಥಿಯು ಉತ್ತರ ಪತ್ರಿಕೆಯನ್ನು ಪಡೆಯುವಾಗ ಆ ಉತ್ತರ ಪತ್ರಿಕೆಯಲ್ಲಿ ಕ್ರಮ ಸಂಖ್ಯೆ ನಮೂದಿತವಾಗಿದೆಯೆ ಎಂದು ನೋಡಬೇಕು. ಸಂಖ್ಯೆ ನಮೂದಿತವಾಗಿರದಿದ್ದರೆ, ಸಂಖ್ಯೆ ನಮೂದಿತವಾಗಿರುವ ಮತ್ತೊಂದು ಉತ್ತರ ಪತ್ರಿಕೆಯನ್ನು ಪಡೆಯಬೇಕು.

★ ಪರೀಕ್ಷೆಯ ಪ್ರಾರಂಭದಲ್ಲಿಯೇ ಪ್ರಶ್ನೆ ಪತ್ರಿಕೆಯಲ್ಲಿ ಮುದ್ರಣ ದೋಷಗಳೇನಾದರು ಇವೆಯೇ? ಎಂಬುದನ್ನು ಪರೀಕ್ಷಿಸಿ ಖಾತರಿ ಮಾಡಿಕೊಳ್ಳಬೇಕು. ಒಂದು ವೇಳೆ ದೋಷಗಳಿದ್ದರೆ, ದೋಷರಹಿತವಾದ ಮತ್ತೊಂದು ಪ್ರಶ್ನೆ ಪತ್ರಿಕೆಯನ್ನು ಪಡೆಯುವುದು.

★ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಪ್ರಶ್ನೆಪತ್ರಿಕೆ ಪುಸ್ತಿಕೆಯ ಕ್ರಮಸಂಖ್ಯೆಯನ್ನು ನಿಗದಿತ ಸ್ಥಳದಲ್ಲಿ ತುಂಬುವ ಮೊದಲು ಈ ಸಂಖ್ಯೆ ಮತ್ತು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮುದ್ರಿತವಾಗಿರುವ ಕ್ರಮಸಂಖ್ಯೆ ಎರಡೂ ಸಂಖ್ಯೆಗಳು ಒಂದೇ ಆಗಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳುವುದು. ಈ ಎರಡೂ ಸಂಖ್ಯೆಗಳು ಒಂದೇ ಆಗಿರಬೇಕು. ವ್ಯತ್ಯಾಸ ಕಂಡುಬಂದಲ್ಲಿ ಉತ್ತರ ಬರೆಯುವ ಮೊದಲೇ ಮೇಲ್ವಿಚಾರಕರ ಗಮನಕ್ಕೆ ತರುವುದು.

★ **ಅಭ್ಯರ್ಥಿ ತನ್ನ ಎಡಗೈ ಹೆಬ್ಬೆರಳಿನ ಗುರುತನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ನಿಗದಿಪಡಿಸಿರುವ ಸ್ಥಳದಲ್ಲಿ ಕಡ್ಡಾಯವಾಗಿ ಹಾಕುವುದು. ಎಡಗೈ ಹೆಬ್ಬೆರಳ ಗುರುತು ರಹಿತ ಉತ್ತರ ಪತ್ರಿಕೆಯನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು. ಎಡಗೈ ಹೆಬ್ಬೆರಳ ಗುರುತು ಸ್ಪಷ್ಟವಾಗಿರಬೇಕು .**

★ ಅಭ್ಯರ್ಥಿಗಳು ತಮ್ಮ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಭರ್ತಿ ಮಾಡುವುದು. ಒಮ್ಮೆ ಬರೆದಿರುವುದನ್ನು ಪುನ: ಹೊಡೆದು ಗಲೀಜು ಮಾಡಬಾರದು.

★ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ನೀಡುವ ಪ್ರಶ್ನೆ ಪತ್ರಿಕೆ ಪುಸ್ತಿಕೆ ಮತ್ತು ಉತ್ತರ ಪತ್ರಿಕೆಗಳಲ್ಲಿ ಮುದ್ರಿತವಾಗಿರುವ ಪರೀಕ್ಷಾ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿ ಅನುಸರಿಸಬೇಕು.

★ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಉಪಯೋಗಿಸುವಾಗ ಬಹಳ ಎಚ್ಚರವಹಿಸಬೇಕು ಅದನ್ನು ಮಡಚುವುದಾಗಲೀ, ಹರಿಯುವುದಾಗಲೀ, ಮುದುರುವುದಾಗಲೀ ಮಾಡಬಾರದು. ಉತ್ತರ ಪತ್ರಿಕೆಯ ಜೊತೆಯಲ್ಲಿ ಯಾವುದೇ ವರ್ಕ್ ಷೀಟನ್ನು ಕಟ್ಟಬಾರದು. ಪರೀಕ್ಷಾ ಕೊಠಡಿಯೊಳಕ್ಕೆ ಉತ್ತರಿಸಲು ಬೇಕಾದ ನೀಲಿ ಅಥವಾ ಕಪ್ಪು ಶಾಯಿಯ ಬಾಲ್‌ಪಾಯಿಂಟ್ ಪೆನ್ನನ್ನು ಮಾತ್ರ ಪ್ರವೇಶ ಪತ್ರದೊಂದಿಗೆ ತೆಗೆದುಕೊಂಡು ಹೋಗಬೇಕು.

★ ಎಲೆಕ್ಟ್ರಾನಿಕ್ಸ್ ವಸ್ತುಗಳಾದ ಕ್ಯಾಲ್ಕ್ಯುಲೇಟರ್, ಲಾಗ್‌ಟೇಬಲ್, ಸೆಲ್ಯೂಲಾರ್ ದೂರವಾಣಿ, ಪೇಜರ್ ಮುಂತಾದ ಸಂಪರ್ಕ ವಸ್ತುಗಳನ್ನು ಪರೀಕ್ಷಾ ಕೊಠಡಿಯೊಳಗೆ ತರುವುದನ್ನು ನಿಷೇಧಿಸಲಾಗಿದೆ.

★ ಪರೀಕ್ಷೆ ಪ್ರಾರಂಭವಾಗುವ 15 ನಿಮಿಷಗಳ ಮೊದಲು ಅಭ್ಯರ್ಥಿಗಳಿಗೆ ಪರೀಕ್ಷಾ ಕೊಠಡಿಗೆ ಪ್ರವೇಶವನ್ನು ನೀಡಲಾಗುವುದು. ಪರೀಕ್ಷೆ ಪ್ರಾರಂಭವಾದ 15 ನಿಮಿಷಗಳ ನಂತರ ಯಾವುದೇ ಕಾರಣಗಳಿಂದ ತಡವಾಗಿ ಬಂದ ಅಭ್ಯರ್ಥಿಯನ್ನು ಪರೀಕ್ಷಾ ಕೊಠಡಿಯೊಳಗೆ ಪ್ರವೇಶಿಸಲು ಅನುಮತಿ ನೀಡುವುದಿಲ್ಲ.

★ ಅಭ್ಯರ್ಥಿಗೆ ಒದಗಿಸಲಾಗಿರುವ ಪ್ರಶ್ನೆ ಪತ್ರಿಕೆ ಕ್ರಮ ಸಂಖ್ಯೆಯನ್ನು ಹಾಜರಾತಿ ಪಟ್ಟಿ ಹಾಗೂ ನಾಮಿನಲ್‌ರೋಲ್‌ಗಳಲ್ಲಿ ನಿಗದಿತಸ್ಥಳದಲ್ಲಿ ಭರ್ತಿಮಾಡಿ ಸಹಿಮಾಡಿ ಹೆಬ್ಬೆರಳಿನ ಗುರುತನ್ನು ಹಾಕುವುದು. ಈ ಸಂದರ್ಭದಲ್ಲಿ ಏನಾದರೂ ತಪ್ಪುಗಳಾದಲ್ಲಿ ಅಭ್ಯರ್ಥಿಯೇ ಸರಿಪಡಿಸತಕ್ಕದ್ದು.

★ ಅಭ್ಯರ್ಥಿಯು ಜಿಲ್ಲಾ ಸಂಕೇತ ಮತ್ತು ನೋಂದಣಿ ಸಂಖ್ಯೆಯನ್ನು ಹೊರತು ಪಡಿಸಿ ಬೇರಾವ ವಿಷಯಗಳನ್ನು ಪ್ರಶ್ನೆ ಪತ್ರಿಕೆ ಪುಸ್ತಿಕೆಯ ಮೇಲೆ ನಮೂದಿಸಕೂಡದು.

★ ಪತ್ರಿಕೆಗೆ ನಿಗದಿ ಪಡಿಸಿರುವ ಅವಧಿ ಮುಗಿದ ನಂತರ ಯಾವುದೇ ಅಭ್ಯರ್ಥಿಯು ಉತ್ತರವನ್ನು ಮರು ಪರಿಶೀಲನೆ ಮಾಡುವುದನ್ನು ನಿಷೇಧಿಸಲಾಗಿದೆ.

★ ಎಲ್ಲಾ ಅಭ್ಯರ್ಥಿಗಳು ಪರೀಕ್ಷೆಗೆ ನಿಗದಿ ಪಡಿಸಿರುವ ವೇಳೆ ಮುಗಿದ ಕೂಡಲೇ, ಉತ್ತರ ಪತ್ರಿಕೆಯನ್ನು ಮೇಲ್ವಿಚಾರಕರಿಗೆ ಒಪ್ಪಿಸಿದ ನಂತರವೇ ಪರೀಕ್ಷಾ ಕೊಠಡಿಯಿಂದ ನಿರ್ಗಮಿಸಬೇಕು.

★ ಅಭ್ಯರ್ಥಿಗಳು ಪರೀಕ್ಷೆ ಪ್ರಾರಂಭವಾದ 30 ನಿಮಿಷಗಳ ನಂತರ ಯಾವುದೇ ಸಮಯದಲ್ಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ಹೋಗಲು ಇಚ್ಛಿಸಿದಲ್ಲಿ ಅಂತಹವರು ತಮಗೆ ನೀಡಲಾಗಿರುವ ಓ.ಎಂ.ಆರ್. ಷೀಟ್ ಮತ್ತು ಪ್ರಶ್ನೆ ಪತ್ರಿಕೆ ಪುಸ್ತಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಒಪ್ಪಿಸಿ ಹೋಗಬಹುದು. ಒಂದು ಬಾರಿ ಹೊರಗೆ ಹೋದ ಅಭ್ಯರ್ಥಿಗೆ ಯಾವುದೇ ಕಾರಣಕ್ಕೂ ಪುನ: ಪರೀಕ್ಷಾ ಕೊಠಡಿಗೆ ಬರಲು ಅವಕಾಶ ನೀಡಲಾಗುವುದಿಲ್ಲ. ಪರೀಕ್ಷಾ ಅವಧಿ ಮುಗಿದ ನಂತರ ಪ್ರಶ್ನೆ ಪತ್ರಿಕೆ ತೆಗೆದುಕೊಂಡು ಹೋಗಬಹುದು.

★ ಯಾವುದೇ ಅಭ್ಯರ್ಥಿಯು ಬೇರೆ ಅಭ್ಯರ್ಥಿಯ ಅಥವಾ ತನ್ನದೇ ಉತ್ತರ ಪತ್ರಿಕೆಯ ನಕಲು ಮಾಡುವುದು ಅಥವಾ ಬೇರೆಯವರಿಗೆ ಕೊಡಲು ಪ್ರಯತ್ನಿಸುವುದು, ತೆಗೆದುಕೊಳ್ಳಲು ಪ್ರಯತ್ನಿಸುವುದು, ಅನಧಿಕೃತ ಸಹಾಯವನ್ನು ಪಡೆಯಲು ಯತ್ನಿಸುವುದು, ಇವುಗಳನ್ನು ಪರೀಕ್ಷಾ ಕೊಠಡಿಯಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿದೆ.

★ ಅಭ್ಯರ್ಥಿಯು ಯಾವುದೇ ಕಾರಣಕ್ಕೂ ತನ್ನೊಂದಿಗೆ ಪರೀಕ್ಷೆಯ ಯಾವುದೇ ಸಾಮಗ್ರಿಗಳನ್ನು ಶೌಚಾಲಯಕ್ಕೆ ಒಯ್ಯುವಂತಿಲ್ಲ. ಶೌಚಾಲಯಕ್ಕೆ ಹೋಗುವ ಮುನ್ನ ತನ್ನ ಉತ್ತರ ಪತ್ರಿಕೆ ಮತ್ತು ಇತರೆ ಹಾಳೆಗಳನ್ನು ಬೋರಲಾಗಿ ತನ್ನ ಸ್ಥಳದಲ್ಲಿಟ್ಟು ಹೋಗಬೇಕು. ಯಾವುದೇ ಅಭ್ಯರ್ಥಿಯು ಪರೀಕ್ಷಾ ಅವಧಿಯ ಕಡೇ 30 ನಿಮಿಷಗಳಲ್ಲಿ ಶೌಚಾಲಯಕ್ಕೆ ಹೋಗಲು ಅನುಮತಿಸುವುದಿಲ್ಲ.

★ ಧೂಮಪಾನ, ಚಹಾಪಾನ ಇವುಗಳನ್ನು ಪರೀಕ್ಷಾ ಕೊಠಡಿಯಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿದೆ.

★ ಬೆಂಕಿಪೊಟ್ಟಣ ಅಥವಾ ಸಿಗರೇಟ್ ಲೈಟರ್ ಇವುಗಳನ್ನು ಪರೀಕ್ಷಾ ಕೊಠಡಿಯೊಳಗೆ ಒಯ್ಯುವುದನ್ನು ನಿಷೇಧಿಸಲಾಗಿದೆ.

★ ಪ್ರತಿ ಅಭ್ಯರ್ಥಿಯು ಮುಖ್ಯ ಅಧೀಕ್ಷಕರು ಅಥವಾ ಕೊಠಡಿ ಮೇಲ್ವಿಚಾರಕರು ನೀಡಿದ ಸೂಚನೆಗಳಿಗೆ / ನಿಯಮಗಳಿಗೆ ಬದ್ಧರಾಗಿರಬೇಕು.

★ ಕೊಠಡಿ ಮೇಲ್ವಿಚಾರಕರು ಅಥವಾ ಮುಖ್ಯ ಅಧೀಕ್ಷಕರು ಅಭ್ಯರ್ಥಿಗಳ ಬಗ್ಗೆ ಏನಾದರೂ ಹೆಚ್ಚಿನ ಮಾಹಿತಿ ಪಡೆಯಬಯಸಿದಲ್ಲಿ ಅಭ್ಯರ್ಥಿಗಳು ಆ ಮಾಹಿತಿಯನ್ನು ನೀಡಲು ಸಿದ್ಧರಿರಬೇಕು.

★ ಅಭ್ಯರ್ಥಿಯು ಪರೀಕ್ಷಾ ಸೂಚನೆ / ನಿಯಮಗಳನ್ನು ಪಾಲಿಸುವಲ್ಲಿ ವಿಫಲರಾದರೆ ಅಥವಾ ನಿಯಮಗಳನ್ನು ಉಲ್ಲಂಘಿಸಿದ ಪಕ್ಷದಲ್ಲಿ ಅವರ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು.